8. ಅಧ್ಯಕ್ಷರ ಅಪ್ಪಣೆ ಮೇರೆಗೆ :

(ಆ) ವಿಷಯ: ಸದನದಲ್ಲಿ ಸಚಿವರುಗಳು ಹಾಗೂ ಅಧಿಕಾರಿಗಳ ಗೈರು ಹಾಜರಿ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೆ, ಬಜೆಟ್ ಮೇಲೆ ಮಾತ ನಾಡಬೇಕು, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ಯಾರೂ ಇಲ್ಲ, ಇದು ಬಜೆಟ್ ಅದೂ ವಿರೋಧ ಪಕ್ಷದ ನಾಯಕರಿಗೆ ಬೆಳಿಗ್ಗೆ ಮಾತನಾಡಲು ಹೇಳಿದ್ದೀರಿ, ಈಗ ಮಂತ್ರಿಗಳು ಯಾರೂ ಇಲ್ಲ ಆ ಕಡೆ ಅಧಿಕಾರಿಗಳ ಗ್ಯಾಲರಿಯಲ್ಲೂ ಯಾರೂ ಇಲ್ಲ.

(ಗೊಂದಲ)

ಅಧ್ಯಕ್ಷರು : ಈಗ ವಿಪ್ ಎಲ್ರಿ? ನೋಡಿ ದಯಮಾಡಿ, ಚನ್ನಿಗಪ್ಪನವರೇ, ನೀವು ಮಂತ್ರಿಗಳಿದ್ದೀರಿ, ಈಗ ನೀವು ಮಂಡಿಸಿರುವಂತಹ ಬಜೆಟ್ ಮೇಲೆ ವಿರೋಧ ಪಕ್ಷದ ನಾಯಕರು ಆರಂಭ ಮಾಡುವವರಿದ್ದಾರೆ. ಅವರ ಕೆಲಸವಲ್ಲ, ನೀವು ಇಲ್ಲಿ ಫುಲ್ ಇರಬೇಕಾಗಿತ್ತು. ಎಲ್ರಿ ನಿಮ್ಮ ಮಂತ್ರಿಗಳು? 3 ಗಂಟೆಗೆ ಅಂದರೆ ಮೂರುಕಾಲು ಆದರೂ ಬಂದಿಲ್ಲ ಅಂದರೆ, ಇದು ಯಾರಿಗೂ ಗೌರವ ತರುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಲಿ, ಮಾನ್ಯ ಅರ್ಥಸಚಿವರು ಬರುತ್ತಿದ್ದಾರೆ.

ಅಧ್ಯಕ್ಷರು : ನಾನು ಒಂದು ಹೇಳುತ್ತೇನೆ, ಚನ್ನಿಗಪ್ಪನವರೇ, ಆರಂಭವಾದಾಗ ನಿಮ್ಮ ಮಂತ್ರಿಗಳಿದ್ದಾರಲ್ಲಾ ಆ ಹೌಸ್‌ನಲ್ಲಿ ಬಿಟ್ಟು ಉಳಿದವರೆಲ್ಲಾ ಇರಬೇಕು. ಭಾರಿ ವಿಸಿಟರ್ಸ್ ನೋಡುವ ಹಾಗೆ ಅಲ್ಲಿ ಕುಳಿತುಕೊಳ್ಳುತ್ತಾರೆ. ಇಲ್ಲಿ ಕರೆಕ್ಟಾಗಿರಬೇಕು. ಈ ಸದನ ನಡೆಯುವಾಗ ಬೇರೆ ಕಾರ್ಯಕ್ರಮಗಳನ್ನು ರದ್ದು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಸಭೆ ಮುಂದೂಡಿ ಬಿಡಿ.

ಅಧ್ಯಕ್ಷರು : ಅದರಲ್ಲೂ ವಿಶೇಷವಾಗಿ ವಿರೋಧ ಪಕ್ಷದ ನಾಯಕರು ಆರಂಭ ಮಾಡುವ ಕಾಲದಲ್ಲಿ ನಿಮ್ಮ ಮಂತ್ರಿಗಳು ಒಬ್ಬರೂ ಇಲ್ಲ ಅಂದರೆ ಗೌರವ ತರುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಆಯಿತು ಬರುತ್ತಾರೆ. ಎಲ್ಲರನ್ನೂ ಕರೆಸಿ. ಮಂತ್ರಿಗಳಿಗೆ ಫೋನ್ ಮಾಡಿ ಇದು ಚೆನ್ನಾಗಿರುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿನ್ನೆ ಆಯವ್ಯಯವನ್ನು ಮಂಡಿಸಿ ಈವತ್ತೂ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಾನ್ಯ

ಮುಖ್ಯಮಂತ್ರಿಗಳಾದರೂ ಇರಬೇಕು. ಅಥವಾ ಉಪ ಮುಖ್ಯಮಂತ್ರಿಗಳಾದರೂ ಇರುಬೇಕು ಅಥವಾ ಇಡೀ ಸದನದ ಎಲ್ಲಾ ಮಂತ್ರಿಗಳಾದರೂ ಇರಬೇಕಾಗಿತ್ತು ಇಷ್ಟು ಬೇಜವಾಬ್ದಾರಿ, ಇಷ್ಟು ಅವಹೇಳನ ಇರಬಾರದು. ಇದು ಪ್ರಜಾತಂತ್ರ ವ್ಯವಸ್ಥೆಯ ಕೊಲೆ.

(ಗೊಂದಲ)

ಅಧ್ಯಕ್ಷರು : ಆಯಿತು. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ, ತಾವು ದಯವಿಟ್ಟು ಸಭಾತ್ಯಾಗ ಮಾಡಿ.

ಶ್ರೀ ಎ.ಟಿ. ರಾಮಸ್ವಾಮಿ : ನಿಮ್ಮ ಮಾತನ್ನು ಒಪ್ಪುತ್ತಿದ್ದೇವೆ ಪಾಟೀಲರೇ;

ಶ್ರೀ ಎಸ್. ಎಸ್. ಪಾಟೀಲ್ : ಈ ಕಡೆ ಇದ್ದಾಗ ಅಲ್ಲಿ ಖಾಲಿ ಬೆಂಚ್ ಇದ್ದುದ್ದಕ್ಕೆ ಏನೇನು ಮಾತನಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ವಿರೋಧಪಕ್ಷದ ನಾಯಕರು ಸಭಾತ್ಯಾಗ ಮಾಡಿ ಸಾರ್.

ಅಧ್ಯಕ್ಷರು: ಅದನ್ನೇ ತಾವ್ಯಾಕೆ ಮುಂದುವರೆಸಿಕೊಂಡು ಹೋಗುತ್ತೀರಿ? ಆಯಿತು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಆಯಿತು. ನಡೆಯಿರಿ. ನಾವುಗಳೆಲ್ಲರೂ ಹೊರಗಡೆ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮುಖ್ಯಮಂತ್ರಿಗಳಾದರೂ ಇರಬೇಕು. ಅಥವಾ ಉಪ ಮುಖ್ಯಮಂತ್ರಿಗಳಾದರೂ ಇರಬೇಕಾಗಿತ್ತು ಅದು ಬಜೆಟ್ ಮಂಡನೆ ಮಾಡುವಾಗ ಅವರು ಇರಲೇ ಬೇಕು ಎಲ್ಲಾ ಅಧಿಕಾರಿಗಳೂ ಇರಬೇಕಾಗಿತ್ತು ಮತ್ತು ಮುಖ್ಯ ಕಾರ್ಯದರ್ಶಿಗಳವರು ಕೂಡ ಇರಬೇಕು.

ಅಧ್ಯಕ್ಷರು : ಅವರಿಗೆ ಈಗಾಗಲೇ ಹೇಳಿಕಳುಹಿಸಿದ್ದೇನೆ. ತಾವು ಸದನದಲ್ಲಿ ಇರಬೇಕು ವಿರೋಧ ಪಕ್ಷದ ನಾಯಕರಲ್ಲಿ ನನ್ನ ವಿನಂತಿ ಏನೆಂದರೆ ವಾಟಾಳ್ ನಾಗರಾಜ್‌ರವರು ಹೇಳಿದರು ಎಂದು ಹೇಳಿ ತಾವು ದಯಮಾಡಿ ಹೋಗಬಾರದು ದಯಮಾಡಿ ಕುಳಿತುಕೊಳ್ಳಿ ಅವರುಗಳು ಬರುತ್ತಾರೆ. ತಾವು ಮಾತನಾಡಿ ತಾವು ಹೇಳುವುದನ್ನು ನಾನು ಒಪ್ಪುತ್ತೇನೆ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಇತರ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಈ ತರಹ ಎಷ್ಟೋ ಪ್ರಕರಣಗಳಲ್ಲಿ ಈ ರೀತಿ ಆಗಿದೆ. ತಾವುಗಳು ಈ ರೀತಿ ಮಾಡುವುದು ಸರಿಯಲ್ಲ ತಾವು ವಿರೋಧ ಪಕ್ಷದ ನಾಯಕರಾಗಿ ಈ ರೀತಿ ಹೋಗುವುದು ಸರಿಯಲ್ಲ. ನೀವು ಮಾಜಿ ಮುಖ್ಯಮಂತ್ರಿಗಳು ಈ ರೀತಿ ಹೋಗುವುದು ಸರಿಯಲ್ಲ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಿಮಗೂ ಕೂಡ ಇದು ಅವಮಾನ. ತಾವೂ ಕೂಡ ಎದ್ದು ಬರಬೇಕು.

ಅಧ್ಯಕ್ಷರು : ತಾವುಗಳು ಕುಳಿತುಕೊಳ್ಳಿ. ಅವರುಗಳು ಬರುತ್ತಾರೆ,

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರನ್ನು ಕರೆಸಿ. ಅರ್ಥ ಮಂತ್ರಿಗಳು ಇರಬೇಕಾಗಿತ್ತು. Taha too ಲೀಡರ್ ಆಫ್ ಅಪೋಜಿಷನ್ ಮಾತನಾಡುವಾಗ ಅವರು ಇರಬೇಕು. ಈಗ ಹತ್ತು ನಿಮಿಷಗಳ ಕಾಲ ಸಭೆಯನ್ನು ಮುಂದೂಡುತ್ತಿದ್ದೇನೆ. ಅರ್ಥಮಂತ್ರಿಗಳು ಎಲ್ಲರನ್ನೂ ಕರೆಸಿ. ಬೇರೆ ಸಮಯವಾದರೆ ಅದೊಂದು ತರಹ ಅದರಲ್ಲೂ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಂತ್ರಿಗಳು ಇರಬೇಕು.

(ಸದನವು 3-24 ಗಂಟೆಗೆ ಮುಂದೂಡಲ್ಪಟ್ಟು ಹತ್ತು ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 4-57ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 4 ಗಂಟೆ 57 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ 22ನೇ ಮಾರ್ಚ್ 2006ರ ಬುಧವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ-II

(1) (123) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ವಿಜಾಪುರ ನಗರದಲ್ಲಿರುವ ಆರಕ್ಷಕ ಠಾಣೆ ಹಾಗೂ ಸಂಚಾರಿ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವುವು?